Govt. of Karnataka.

Deposition Sheets (R.P.No.57)
Form No.4 (Criminal)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಬದಾಮಿ,
ಸಂಚಾರಿ ನ್ಯಾಯಾಲಯ, ಗುಳೇದಗುಡ್ಡ

ಸಿ.ಸಿ. ನಂ. 718/2019

| | | | |
|---|---|---|---|
| ಹೆಸರು | ಲಕ್ಷ್ಮಣ ಶಾಂತಕೇರಿ | ಪಿ.ಡಬ್ಲ್ಯೂ: | 12 |
| ತಂದೆ/ಗಂಡನ ಹೆಸರು | ಗಂಗಪ್ಪ | ಸಿ.ಡಬ್ಲ್ಯೂ: | 12 |
| ವಯಸ್ಸು | 43 ವರ್ಷ | | |
| ಉದ್ಯೋಗ | ಪಿ.ಡಿ.ಓ. ಹಂಗರಗಿ | | |
| ವಿಳಾಸ | ಬಾಗಲಕೋಟೆ | | |

ದಿಃ 20.01.2026 ರಂದು ಸಾಕ್ಷಿಗೆ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು 2019 ರಿಂದ 2023 ರವರೆಗೆ ಕೋಟೆಕಲ್ ಗ್ರಾಮ ಪಂಚಾಯತಿಯಲ್ಲಿ ಪಿ.ಡಿ.ಓ. ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿ. 04.08.2019 ರಂದು ಚಾಸಾ-13 ರವರು ಆರೋಪಿಗೆ ಸಂಬಂದಿಸಿದ ಉದ್ಯೋಗ ಪ್ರಮಾಣ ಪತ್ರ ಪೂರೈಸಲು ಲಿಖಿತ ಪತ್ರ ನೀಡಿದ್ದರು. ನಂತರ ನಾನು ದಿ. 05.08.2019 ರಂದು ಚಾಸಾ-13 ರವರಿಗೆ ಆರೋಪಿಯ ಕರ್ತವ್ಯದ ಕುರಿತು ಪ್ರಮಾಣ ಪತ್ರವನ್ನು ಪೂರೈಸಿರುತ್ತೇನೆ. ಸಾಕ್ಷಿ ಸದರಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.8 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿ.ಪಿ.8(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎ.ಬಿ.ಯು ವಕೀಲರಿಂದ**

ದಿ. 04.08.2019 ರಂದು ಪೋಲಿಸ ಅಧಿಕಾರಿಗಳು ಆರೋಪಿಗೆ

ಸಂಬಂದಿಸಿದ ಉದ್ಯೋಗ ಪ್ರಮಾಣ ಪತ್ರ ಪೂರೈಸಲು ಲಿಖಿತ ಪತ್ರ ನೀಡಿದ್ದರು. ಸದರಿ ಪತ್ರ ನಾನು ಪೋಲಿಸರಿಗೆ ನೀಡಿರುವುದಿಲ್ಲ. ಪೋಲಿಸರು ನನ್ನ ಹೇಳಿಕೆ ಪಡೆದಿರುವುದಿಲ್ಲ. ಆರೋಪಿ ಮತ್ತು ಚಾಸಾ-1 ರವರು ಮದ್ಯ ಜಗಳ ಆದ ಬಗ್ಗೆ ಪೋಲಿಸರು ನನಗೆ ನಿ.ಪಿ.8 ನ್ನು ಒದಗಿಸಲು ಮಾಹಿತಿ ಕೇಳಿರುತ್ತಾರೆ. ಪ್ರಕರಣದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಪೋಲಿಸ ಅಧಿಕಾರಿಗಳ ಮಾತು ಕೇಳಿ ನಿ.ಪಿ.8 ನ್ನು ಖೊಟ್ಟಿ ರೀತಿ ಕೊಟ್ಟಿರುತ್ತೇನೆ ಅಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ

Sd/-
ಪ್ರಧಾನ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಬದಾಮಿ,
ಸಂಚಾರಿ ನ್ಯಾಯಾಲಯ, ಗುಳೇದಗುಡ್ಡ

Govt. of Karnataka.

Deposition Sheets (R.P.No.57)
Form No.4 (Criminal)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಬದಾಮಿ,
ಸಂಚಾರಿ ನ್ಯಾಯಾಲಯ, ಗುಳೇದಗುಡ್ಡ

ಸಿ.ಸಿ. ನಂ. 718/2019

| | | | |
|---|---|---|---|
| ಹೆಸರು | ಹುಚ್ಚೇಶ ಕಂಬಾಳಿಮಠ | ಪಿ.ಡಬ್ಲ್ಯೂ: | 11 |
| ತಂದೆ/ಗಂಡನ ಹೆಸರು | ವಿರುಪಾಕ್ಷಯ್ಯ | ಸಿ.ಡಬ್ಲ್ಯೂ: | 7 |
| ವಯಸ್ಸು | 43 ವರ್ಷ | | |
| ಉದ್ಯೋಗ | ಕೂಲಿ | | |
| ವಿಳಾಸ | ಕೋಟೆಕಲ್ | | |

ದಿಃ 20.01.2026 ರಂದು ಸಾಕ್ಷಿಗೆ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನ್ಯಾಯಾಲಯದ ಮುಂದೆ ಇರುವ ಆರೋಪಿತನ ಪರಿಚಯ ನನಗಿದೆ. ಚಾಸಾ-1, 8 ರಿಂದ 11 ರವರ ಪರಿಚಯ ಇದೆ.

ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿ ಚಾಸಾ-1, 8 ರಿಂದ 9 ರವರಿಗೆ ಅವಾಚ್ಯವಾಗಿ ಬೈಯ್ದಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಸಾಕ್ಷಿ ತನ್ನ ಹೇಳಿಕೆ ನಿರಾಕರಿಸಿದ ಹೇಳಿಕೆಯನ್ನು ನಿ.ಪಿ.14 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಬಾಗಶ: ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

ನಾನು ಕೋಟೆಕಲ ಗ್ರಾಮದ ನಿವಾಸಿಯಾಗಿರುತ್ತೇನೆ. ನಾನು ಚಾಸಾ-1, 4, 5 ಎಲ್ಲರೂ ಸೇರಿ ಆಗಾಗ ಕೋಟೆಕಲ ಗ್ರಾಮ ಪಂಚಾಯತಿಗೆ ಹೋಗಿ ಅಲ್ಲಿರುವ ಸಿಬ್ಬಂಧಿ ಜನರಿಗೆ ಊರಿನಲ್ಲಿರುವ ನೀರಿನ ವ್ಯವಸ್ಥೆ, ರಸ್ತೆಯ ವ್ಯವಸ್ಥೆ ಮತ್ತು ಗಟಾರ ವ್ಯವಸ್ಥೆ ಮತ್ತು ಇತರೆ ವ್ಯವಸ್ಥೆಗಳನ್ನು ಮಾಡಿಸುವುದಾಗಿ ಮೌಖಿಕವಾಗಿ ಹೇಳುತ್ತಿದ್ದೆವು ಅಂದರೆ ಸರಿಯಲ್ಲ. ಆಗ ಆರೋಪಿ ನಮಗೆ ಅವಾಚ್ಯ ಶಬ್ದಗಳಿಂದ ಬೈಯ್ದು ನಿಮ್ಮನ್ನು ನೋಡಿಕೊಳ್ಳುತ್ತೇನೆ ಎಂದು ಬೆದರಿಕೆ ಹಾಕಿದ್ದ ಅಂದರೆ ಸರಿಯಲ್ಲ.

ದಿ. 04.08.2019 ರಂದು ಸಾಯಂಕಾಲ 04.26 ರಿಂದ 04.43 ರವರೆಗೆ ಆರೋಪಿ ನಮ್ಮೂರಿನ ಚಾಸಾ-10 ರವರ ಮೊಬೈಲ ನಂ. 9008448024 ಮತ್ತು ಚಾಸಾ-11 ರವರ ಮೊಬೈಲ ನಂ. 9353382812 ಇದರಿಂದ ಚಾಸಾ-1 ರವರ ಮೊಬೈಲ ನಂ. 9880520964 ಇದಕ್ಕೆ ಫೋನ ಮಾಡಿ ಲೇ ಬೋಸಡಿ ಮಗನಾ, ಸೂಳಿ ಮಗನಾ, ಹಾದರಗಿತ್ತಿ ಮಗನಾ ನಿಂದು ತಿಂಡಿ ಬಹಳಾ ಆಗೈತಿ, ನಮ್ಮ ಪಂಚಾಯತಿಯಿಂದಾ ಕೆಲಸ ಕೇಳುತೀದಿ ಮಗನಾ ನಿನ್ನ ಊರು ಬಿಟ್ಟು ಓಡಿಸ್ತಿನಿ ಅಂತಾ ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿದನು ಎಂದು ಚಾಸಾ-1 ರವರು ನನಗೆ ಹೇಳಿರುತ್ತಾರೆ ಅಂದರೆ ಸರಿಯಲ್ಲ. ಅದೇ ದಿನ ರಾತ್ರಿ 9.30 ಗಂಟೆಯ ಸುಮಾರಿಗೆ ಚಾಸಾ-4 ರವರು ತಮ್ಮ ಮನೆಯಲ್ಲಿದ್ದಾಗ ಆರೋಪಿ ಈತನು ಚಾಸಾ-4 ರವರ ಮನೆಯ ಮುಂದೆ ಬಂದು ಲೇ ಬೋಸಡಿ ಮಗನಾ, ಸೂಳಿ ಮಗನಾ, ಹಾದರಗಿತ್ತಿ ಮಗನಾ ನಿಂದು ತಿಂಡಿ ಬಹಳಾ ಆಗೈತಿ, ನಮ್ಮ ಪಂಚಾಯತಿಯಿಂದಾ ಕೆಲಸ ಕೇಳುತೀದಿ ಮಗನಾ ನಿನ್ನ ಊರು ಬಿಟ್ಟು ಓಡಿಸ್ತಿನಿ ಅಂತಾ ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿ ನಿಂದು ಬಹಾಳ ಆಗೈತಿ ಮನೆ ಬಿಟ್ಟು ಹೊರಗೆ ಬಾ ನಿನ್ನನ್ನು ಖಲಾಸ ಮಾಡುತ್ತೇನೆ ಎಂದು ಜೀವಬೆದರಿಕೆ ಹಾಕಿದ್ದು ಆಗ ಚಾಸಾ-9 ರವರು ಮದ್ಯ ಪ್ರವೇಶಿಸಿ ಆರೋಪಿಗೆ ಬುದ್ದಿವಾದ ಹೇಳಿ ವಾಪಸ ಕಳಿಸಿರುತ್ತಾರೆ ಎಂದು ಚಾಸಾ-1 ರವರು ನನಗೆ ಹೇಳಿರುತ್ತಾರೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಬಿ.ಯು ವಕೀಲರು ಅ.ಸಾ. ರವರ ವಿರುದ್ಧ ಯಾವುದೇ ಪಾಟಿಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ

Sd/-
ಪ್ರಧಾನ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಬದಾಮಿ,
ಸಂಚಾರಿ ನ್ಯಾಯಾಲಯ, ಗುಳೇದಗುಡ್ಡ